ಅಥಣಿ ತಾಲ್ಲೂಕಿನ 220 ಕೆ.ವಿ.ಎ ಸ್ಟೇಶನ್ ಮಂಜೂರಾತಿ ಕುರಿತು

1581 (1685) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ 220 ಕೆ.ವಿ ಸ್ಟೇಷನ್ ಮಂಜೂರಾತಿಯಾಗುವುದು ಯಾವಾಗ; ಈ ಕಾರ್ಯಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣ ಕಾಯ್ದಿರಿಸಲಾಗಿದೆ; ಅಥಣಿ 220 ಕೆ.ವಿ. ಸ್ಟೇಷನ್ ಯಾವಾಗ ಪ್ರಾರಂಭವಾಗುವುದು. ಸದರಿ ಕಾರ್ಯ ಯಾವಾಗ ಪೂರ್ಣಗೊಳ್ಳುವುದು;

ಆ) ಅಥಣಿ ತಾಲ್ಲೂಕಿನಲ್ಲಿ ಅತೀ ಹೆಚ್ಚಿನ ವಿದ್ಯುತ್ ಗ್ರಾಹಕರಿದ್ದು, ವಿದ್ಯುತ್ ಪಂಪ್‌ಸೆಟ್ಟುಗಳಿಗೆ ಹಾಗೂ ನೀರಾವರಿ ಯೋಜನೆಗಳಿಗೆ ಅತೀ ವಿದ್ಯುತ್ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಪೂರಕವಾಗಿ 220 ಕೆ.ವಿ.ಎ. ಸ್ಟೇಷನ್ ಮಂಜೂರು ಮಾಡುವ ಕುರಿತು ಪೂರ್ಣ ವಿವರ ನೀಡುವುದು;

ಇ) ಅಥಣಿ ತಾಲ್ಲೂಕಿನ ಐಗಳಿ 33 ಕೆ.ವಿ.ಎ. ಸ್ಟೇಷನ್ನಲ್ಲಿ ಎಷ್ಟು ಗ್ರಾಮಗಳು ಬರುತ್ತವೆ. ಸದರಿ ಸ್ಟೇಷನ್‌ನಲ್ಲಿ ವಿದ್ಯುತ್ ಪೂರೈಕೆ ಎಷ್ಟಿದೆ; ಇದನ್ನು 110 ಕೆ.ವಿ.ಎ ಸ್ಟೇಷನ್ ಆಗಿ ಪರಿವರ್ತಿಸುವ ಪ್ರಸ್ತಾವ ಸರ್ಕಾರಕ್ಕೆ ಇದೆಯೇ;

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ 220 ಕೆ.ವಿ. 2x100ಎಂ.ವಿ.ಎ ಸಾಮರ್ಥ್ಯದ ವಿತರಣಾ ಕೇಂದ್ರಕ್ಕೆ ತಾಂತ್ರಿಕ ಸಮಿತಿ ಮಂಜೂರಾತಿ ನೀಡಿದ್ದು, ಭೂ ಸ್ವಾಧೀನ ಕಾರ್ಯ ಪ್ರಕ್ರಿಯೆಯಲ್ಲಿದೆ. ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ, ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ಹಾಗೂ ಆರ್ಥಿಕ ವ್ಯವಸ್ಥೆಯನ್ನು ಮಾಡಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಬಂದಿದೆ. ಆದ್ದರಿಂದ 220 ಕೆ.ವಿ.ಎ ಸ್ಟೇಷನ್ ಸ್ಥಾಪಿಸಲು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಮೇಲೆ ತಿಳಿಸಿದಂತೆ ಈ ಕಾಮಗಾರಿ ಪೂರ್ಣಗೊಳಿಸಲು ತ್ವರಿತ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಅಥಣಿ ತಾಲ್ಲೂಕಿನ ಐಗಳಿ 33:11 ಕೆ.ವಿ. ಉಪಕೇಂದ್ರದಿಂದ ಆದಲಗಟ್ಟಿ, ಕೊಹಳ್ಳಿ, ಶಿವಪುರ, ರಾಮತೀರ್ಥ, ಕನಹಾಳ, ಬನ್ನೂರ, ಹೊಳ್ಳಳ್ಳಿ, ಅರಟಾಳ, ಕೋಟಲಗಿ, ಬಡಗಿ ಮತ್ತು ಎಲಿಹಾದಲಗಿ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಈ ಉಪ ಕೇಂದ್ರದ ಸಾಮರ್ಥ್ಯ 2x5 ಎಂ.ವಿ.ಎ. ಈ ಉಪ ಕೇಂದ್ರವನ್ನು 110 ಕೆ.ವಿ.ಗೆ ಮೇಲ್ದರ್ಜೆಗೊಳಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಕಾರ್ಕಳದಲ್ಲಿರುವ ಆನೆಕೆರೆಯ ಸಂಪೂರ್ಣ ಅಭಿವೃದ್ಧಿ

1582 (1840) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳದಲ್ಲಿರುವ ಆನೆಕೆರೆ ಅತ್ಯಂತ ಪರಾತನ ಕೆರೆಯಾಗಿದ್ದು ಅದನ್ನು ಅಭಿವೃದ್ಧಿ ಪಡಿಸಲು ಈ ತನಕ ಭೌತಿಕ ಮತ್ತು ಆರ್ಥಿಕವಾಗಿ ಖರ್ಚು ಮಾಡಿದ ಹಣವೆಷ್ಟು; (ವಿವರ ಒದಗಿಸುವುದು)

ಅ) ಆನೆಕೆರೆಯನ್ನು ಸಂಪೂರ್ಣ ಅಭಿವೃದ್ಧಿ ಪಡಿಸಲು ತಯಾರಿಸಿರುವ ಯೋಜನೆ ಯಾವ ಹಂತದಲ್ಲಿದೆ;

ಇ) ಕಾರ್ಕಳದಲ್ಲಿರುವ ರಾಮಸಮುದ್ರ ತೀರಾ ಹೂಳು ತುಂಬಿದ್ದು ನೂರಾರು ಎಕರೆ ವಿಸ್ತೀರ್ಣದ ಸದರಿ ಕೆರೆಯನ್ನು ಅಭಿವೃದ್ಧಿ ಪಡಿಸುವ ಯೋಜನೆ ಏನಾದರೂ ಇದೆಯೇ? (ವಿವರ ಒದಗಿಸುವುದು).

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಆನೆಕೆರೆ ಅಭಿವೃದ್ಧಿ ಪಡಿಸಲು ಈ ತನಕ 1,03,802 ಘನ ಮೀಟರ್ ಹೂಳನ್ನು ರೂ. 18.80 ಲಕ್ಷ ವೆಚ್ಚದಲ್ಲಿ ತೆಗೆದಿದ್ದು, ಕೋಡಿ ನಿರ್ಮಾಣ ಸ್ಲೂಯಿಸ್ ದುರಸ್ತಿ, ಏಪ್ರಾನ್ ನಿರ್ಮಾಣ ಮತ್ತು ದಂಡೆ ಸಂರಕ್ಷಣಾ ಕಾಮಗಾರಿಗಳನ್ನು ರೂ 5.13 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ಸೂಚಿಸಲಾಗಿದೆ.

ಆ) ಕಾರ್ಕಳ ತಾಲ್ಲೂಕಿನ ಆನೆಕೆರೆ ಅಭಿವೃದ್ಧಿ ಕಾರ್ಯವನ್ನು ರೂ. 30.00 ಲಕ್ಷ ಅಂದಾಜು ಮೊತ್ತದಲ್ಲಿ ಆರ್.ಐ.ಡಿ.ಎಫ್-7 ರ ಯೋಜನೆಯಡಿ ಕೈಗೆತ್ತಿಕೊಳ್ಳಲು ಸಚಿವ ಸಂಪುಟ ಉಪ ಸಮಿತಿಯಿಂದ ಅನುಮೋದನೆ ದೊರೆತಿದೆ. ಆದರೆ ವಾಸ್ತವಾಗಿ ಸಂಪೂರ್ಣ ಅಭಿವೃದ್ಧಿ ಪಡಿಸಲು ರೂ. 200.00 ಲಕ್ಷ ಬೇಕಾಗಿದ್ದು, ಅಂದಾಜನ್ನು ತಯಾರಿಸಲಾಗಿದೆ. ಈ ಕಾಮಗಾರಿಯನ್ನು ನಬಾರ್ಡ್ ಆರ್.ಐ.ಡಿ.ಎಫ್-7ರ ಯೋಜನೆಯಡಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಸಣ್ಣ ನೀರಾವರಿ ಇಲಾಖೆಯಲ್ಲಿ ಅಂತಹ ಯಾವುದೇ ಯೋಜನೆ ಇರುವುದಿಲ್ಲ.

ಅನುಬಂಧ-1

ಕ್ರ.ಸಂ	ಕಾಮಗಾರಿಯ ಹೆಸರು ಮಂಜೂರಾತಿ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಈವರೆಗೆ ಆಗಿರುವ ವೆಚ್ಚ ರೂ. ಲಕ್ಷಗಳಲ್ಲಿ	ಭೌತಿಕ ಪ್ರಗತಿ
1	ಆನೆಕೆರೆ ಅಭಿವೃದ್ಧಿ ಕಾಮಗಾರಿ ಸಿ.ಆರ್.ಸಂ:23:92-93 ದಿ: 23-06-92	7.80	7.72	ರೂ.5,87, 419.00ಗಳ ವೆಚ್ಚದಲ್ಲಿ 39,056 ಘನಮೀಟರ್ ಹೂಳನ್ನು ತೆಗೆಯಲಾಗಿದೆ. ರೂ. 1,84,581.00 ಗಳ ದಂಡೆ ಸಂರಕ್ಷಣಾ ಕಾಮಗಾರಿಯನ್ನು ಮಾಡಲಾಗಿದೆ.
2	ಆನೆಕೆರೆ ಅಭಿವೃದ್ಧಿ ಕಾಮಗಾರಿ ಸಿ.ಆರ್.ಸಂ:223:93-94 ದಿ: 31-03-94	7.45	7.83	ಕಳೆ ತೆಗೆಯುವ ಕೆಲಸ, ಜಿ.ಐ.ಪೈಪು ಹ್ಯಾಂಡ್ ರೈಲ್ ಅಳವಡಿಸುವುದು ಹಾಗೂ ಹೂಳು ತೆಗೆ--ಯುವ ಕೆಲಸವನ್ನು ಮಾಡಲಾಗಿದೆ.

3	ಆನೆಕೆರೆ ಕೋಡಿ ದುರಸ್ತಿ ಕಾಮಗಾರಿ ಡಿ.ಇ.ಆರ್.ಸಂ:172:94-95 ದಿ: 23.5.95	2.00	2.34	ಏಪ್ರಾನ್‌ಗಳ ನಿರ್ಮಾಣ ಮತ್ತು ಸ್ಲೂಯಿಸ್ ದುರಸ್ತಿ ಕಾಮಗಾರಿಯನ್ನು ಮಾಡಲಾಗಿದೆ.
4	ಆನೆಕೆರೆ ಹೂಳೆತ್ತುವ ಕಾಮಗಾರಿ (ರೈತರ ಸಹಯೋಗದೊಂದಿಗೆ) ಸಿ.ಆರ್.ಸಂ:63:98-99 ದಿ: 22-10-98.	5.70	6.04	51,336 ಘನ ಮೀಟರ್ ಹೂಳನ್ನು ತೆಗೆಯಲಾಗಿದೆ.

ಔರಾದ್ ನಗರಕ್ಕೆ ಬಸ್ ನಿಲ್ದಾಣ ನಿರ್ಮಾಣ

1583 (1884) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ನಗರದಲ್ಲಿ ಬಸ್ ಡಿಪೋ ನಿರ್ಮಾಣ ಮಾಡಲು ಸರ್ಕಾರ ಮಂಜೂರಾತಿ ನೀಡಿದೆಯೇ.

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಿತ್ತು.

ಇ) ಈ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಹಣವೆಷ್ಟು; ಯಾವ ಯಾವ ಮೂಲದಿಂದ ಬಂದಿದೆ; ಬಸ್ ಡಿಪೋಕ್ಕೆ ಬೇಕಾದಂತಹ ಭೂಮಿ ಸಿದ್ದವಾಗಿದೆಯೇ;

ಈ) ಹಾಗಿದ್ದಲ್ಲಿ ಇದುವರೆಗೆ ಏಕೆ ಕಾಮಗಾರಿ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. (ನೆನೆಗುದಿಗೆ ಬಿಳಲು) ಇದಕ್ಕೆ ಕಾರಣವೇನು;

ಉ) ಈಗಾಗಲೇ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ ನಿಗದಿಪಡಿಸಿ ಮುಂದೂಡಿರುವ ಸಂಗತಿ ನಿಜವೇ; ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು; ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಮಾನಾಥ ರೈ ಬಿ (ಸಾರಿಗೆ ಸಚಿವರು) :

ಅ) ನೀಡಿದೆ.

ಆ) ದಿನಾಂಕ 27.11.2001 ರಂದು

ಇ) ಈ ಕಾಮಗಾರಿಗಾಗಿ ಒಟ್ಟು 100-00 ಲಕ್ಷ ರೂ.ಗಳ ವೆಚ್ಚ ತಗುಲಲಿದೆ. ಇದರ ಪೈಕಿ 50-00 ಲಕ್ಷ ರೂ.ಗಳನ್ನು ಔರಾದ್ ಶಾಸಕರ ಅನುದಾನದಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಉಳಿದ 50-00 ಲಕ್ಷ ರೂ.ಗಳನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ವೆಚ್ಚ ಮಾಡಲಿದೆ.

ಘಟಕಕ್ಕೆ ಬೇಕಾದ 6 ಎಕರೆ 32 ಗುಂಟೆ ನಿವೇಶನವು ಸಂಸ್ಥೆಯ ವಶದಲ್ಲಿರುತ್ತದೆ.

ಈ) ಈ ಕಾಮಗಾರಿಯನ್ನು ದಿನಾಂಕ 28.6.2002 ರಂದು ಪ್ರಾರಂಭಿಸಲಾಗಿದೆ.

ಉ) ಇಲ್ಲ.

ಈ ಕಾಮಗಾರಿಗಾಗಿ ಅಡಿಗಲ್ಲು ಸಮಾರಂಭವನ್ನು ಅಂದಿನ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿರವರು ನೆರವೇರಿಸುತ್ತಾರೆ. ಕಾಮಗಾರಿಯನ್ನು